ಹೊಂದಿಸಿಕೊಳ್ಳುತ್ತಾ ಅವನನ್ನು ಹುಚ್ಚನಂತೆ ಪ್ರೀತಿಸತೊಡಗಿದಳು.

**ವಿನಿತಾಳ ಕನಸಿಗೆ ಕೈಕಾಲು ಚಿಗುರಿ ಜೀವವೊಂದು ಬೆನ್ನಿಗಂಟಿದ ಬ್ರಹ್ಮಾಂಡದೊಳಗೆ ಆಕಾರಗೊಳ್ಳುತ್ತಿತ್ತು. ಹೊಟ್ಟೆಯಲ್ಲಿನ ಕಂದಮ್ಮನನ್ನು ಎಷ್ಟು ಕಲ್ಪಸಿಕೊಂಡರೂ ಎಷ್ಟು ಬಾರಿ ಮುಟ್ಟಿದರೂ ಹೆಣ್ಣೋ ಗಂಡೋ ತಿಳಿಯದಾಗಿತ್ತು. ದಿನದಿಂದ ದಿನಕ್ಕೆ ಬಸುರಿ ಹೆಂಗಸಿನ ಮೈ ಬಂಗಾರ ಬಣ್ಣಕ್ಕೆ ತಿರುಗಿದಂತೆಲ್ಲ ಹುಟ್ಟುವ ಕೂಸಿಗೂ ವಿಚಿತ್ರವಾದ ಮೋಹಕಶಕ್ತಿ...**

## ಅಪ್ಪನೆಂಬ ಆಲ...

ಆ ದಿವಸ ಬೆಳಗಾವಿಯಿಂದ ಬೆಂಗಳೂರಿಗೆ ಬಂದಿದ್ದ ಶಾಣಪ್ಪನವರು ಮಗಳ ಮನೆಗೆ ಬರದೆ ಹಂಗಿಂದಹಂಗೆ ಪಾರ್ಟಿ ಆಫೀಸ್‌ಗೆ ಹೋಗಿದ್ದರು. ಸಂಜೆಯೊಳಗೆ ವೈರಮುಡಿಯ ಆಕಾರವನ್ನ ಬದಲಿಸಿ ಇವರೆ ನಿಮ್ಮ ಅಳಿಯ ಎಂದು ಹೇಳುವ ತರಾತುರಿಯಲ್ಲಿದ್ದಳು. ಆವತ್ತು ಎಳೆಮಗುವನ್ನು ಶಾಲೆಗೆ ಕಳಿಸುವ ರೀತಿಯಲ್ಲಿ ವೈರಮುಡಿ ಅವಳ ಕೈಗೊಂಬೆಯಂತಾಗಿದ್ದ. ಅಕ್ಕರದ ಹೆಣ್ಣು ತಂಗಾಳಿಯಂತೆ ಸುತ್ತ ಸುಳಿದಾಡುವಾಗ ಯಕ್ಷಿಯ ಮಾಯಾಮೋಹಕ್ಕೆ ಬಲಿಯಾದವನಂತೆ ಅವಳೆದುರು ದುಂಡಗೆ ನಿಂತಿದ್ದ. ಅವಳ ನಗು, ನಿಲುವು, ಬಳೆಗಳ ಸದ್ದು, ಎದೆಮಿಡಿತ, ಬಿಸಿಉಸಿರು, ತುಂಟತನ, ಕೂದಲಿನ ಪರಿಮಳ ಅವನ ಕುಡಿನೋಟದೊಳಗೆ ಸತತ ಸಂವಾದ ನಡೆಸಿದ್ದವು. ಎಂಟಾನೆಂಟು ದಿನಗಟ್ಟಲೆ ಹಾಕಿಕೊಂಡರೂ ಕೊಳಕಾಗದ ಟಾರ್ಪಲ್ಲಿನಂತ ತನ್ನ ಬಟ್ಟೆಗಳನ್ನು ಬಿಸಾಡಿ ವಿನಿತಾ ಕೊಡಿಸಿದ ಸೂಟ್ ಹಾಕಿಕೊಂಡ. ಕ್ರಾಪ್ ಬಾಚಿ, ಸುಗಂಧವನ್ನೂ ಮೈಗೆ ಆಕೆಯೇ ಪೂಸಿದಳು. ಮೊದಲ ಸಲ ಅವಳ ಸ್ವಭಾವಕ್ಕೆ ತಕ್ಕಂತೆ ತಾನು ವರ್ತಿಸುತ್ತಿರುವುದು ಗಮನಕ್ಕೆ ಬಂದರೂ ದಿಲ್ ಸೋತ ಕಾರಣಕ್ಕೆ ಸುಮ್ಮನಾದ.

ಅಪ್ಪ ಬಂದರು ಎನ್ನುವಷ್ಟರಲ್ಲಿ ಹೇಗೆ ಬಂದರೋ ಹಾಗೆ ಹೊರಟು ತಯಾರಾಗಿ ನಿಂತಿದ್ದರು. ರಾಜಕಾರಣದ ಸಣ್ಣತನಗಳು, ಕ್ಷುಲ್ಲಕ ಆರೋಪಪ್ರತ್ಯಾರೋಪಗಳ ಹೊರೆಹೊತ್ತವರಂತೆ ಬಸವಾ ಎಂದುಚ್ಚರಿಸುತ್ತ ಮೈಗಂಟಿದ್ದ ಖಾದಿಯನ್ನೊಮ್ಮೆ ಝಾಡಿಸಿ ಕುಳಿತರು. ಹೆಂಡತಿ ಸತ್ತ ಮೇಲೆ ಶಾನಪ್ಪನವರು ಹಣ್ಣಾಗಿದ್ದಾರೆ ಎಂಬ ಮಾತು ಸತ್ಯವೆಂಬುದಕ್ಕೆ ಅವರ ದೈನೇಸಿ ಮುಖಭಾವವೇ ಸಾಕ್ಷಿಯಾಗಿತ್ತು. ವಿನಿತಾ ಥೇಟ್ ತಾಯಿಯ ಮುಖವನ್ನೆ ಕಡೆದು ಹುಟ್ಟಿದಂತಿದ್ದರೂ ಸ್ವಭಾವದಲ್ಲಿ ಎಣ್ಣೆಸೀಗೆ... ಒಂಟಿತನ, ಮೊಂಡುತನಕ್ಕೆ ಮತ್ತೊಂದು ಹೆಸರು ಮಗಳದ್ದಾದರೆ, ಮನೆಗೆ ಬರುವ ಮಂದಿಮಕ್ಕಳು, ವ್ಯವಹಾರ, ಮನೆತನದ ಸಮಸ್ತ ದೇಖರೇಕಿಯನ್ನು ನಿಭಾಯಿಸುವ ತಾಯ್ತನ ಅವಳದ್ದಾಗಿತ್ತು. ಹೆಂಡತಿ ಕಟ್ಟಾ ಸಂಪ್ರದಾಯವಾದಿ ಹೆಣಮಗಳು. ಸೀರೆ, ಬಳೆ, ಓಲೆಬೆಂಡೋಲೆ, ನತ್ತು, ವಂಕಿ, ಡಾಬು, ಗುಳದಾಳಿ, ಚೈನು ಕಾಲಚೈನು, ಎರಡ ಬೆರಳು ವಿಬತ್ತಿ ಕುಂಕುಮ ಜಪತಪ ಇತ್ಯಾದಿಗಳ ನಡುವೆ ಬದುಕಿದಾಕೆ. ಅವ್ವನನ್ನು ಸರಿಗಟ್ಟಿಕೊಂಡು ಅರೆಬರೆ ಬಟ್ಟೆ ತೊಟ್ಟು ಹೆತ್ತಕರುಳನ್ನು ಹಣ್ಣಾಗಿಸಿಬಿಡುತ್ತಿದ್ದಳು. ಮುಸಿಮುಸಿ ನಡೆದಿರುತ್ತಿದ್ದ ಇಬ್ಬರ ಗುದ್ದಾಟ ವಿನಿತಾಳ ಸ್ವಾಸ್ಥ್ಯವನ್ನೆ ಕೆಡಿಸಿಬಿಟ್ಟಿತ್ತು.